

ಇದೆಂಥಾ ವಿಷಯ? ಪ್ರತಿಯೊಬ್ಬರೂ ಒಂದಲ್ಲಾ ಒಂದು ಬಾರಿ ಬಸ್ಸಿನಲ್ಲೋ ರೈಲಿನಲ್ಲೋ ನಿಂತೇ ಪ್ರಯಾಣಿಸಿರುತ್ತಾರೆ. ಲೇಖನ ಬರೆಯುವಷ್ಟು ಹೆಚ್ಚುಗಾರಿಕೆ ಇದರಲ್ಲೇನಿದೆ ಎನ್ನುವಿರಾ? ನಿಮ್ಮನಿಸಿಕೆಗೆ ನನ್ನ ಸಂಪೂರ್ಣ ಸಹಮತವಿದೆ. ಆ... ದ... ರೆ ಕೈಯಲ್ಲಿ ಎ.ಸಿ. ಫಸ್ಟ್ ಕ್ಲಾಸ್ ಟಿಕೆಟ್ ಇಟ್ಟುಕೊಂಡು ಸ್ಟ್ಯಾಂಡಿಂಗ್ ಸೀಟಿನಲ್ಲಿ ಪ್ರಯಾಣಿಸುವುದೆಂದರೆ? ವಿಶೇಷ ತಾನೇ? ಅದನ್ನೇ ನಾನೀಗ ಹೇಳಹೊರಟಿರುವುದು. ಪರಾಂಬರಿಸೋಣವಾಗಲಿ.

ಮೂವತ್ತಕ್ಕೂ ಹೆಚ್ಚು ವರ್ಷಗಳು ಹೊರನಾಡಿನ ಕನ್ನಡತಿಯಾಗಿದ್ದ ನನಗೆ ನಮ್ಮೂರು, ನಮ್ಮ ಭಾಷೆ, ನಮ್ಮ ಸಂಸ್ಕೃತಿ, ಆಚರಣೆಗಳಿಗಾಗಿ ತೀರದ ಹಂಬಲ. ತುಸು ಅವಕಾಶ ಸಿಕ್ಕರೂ ಸಾಕು ತೌರೂರಿಗೆ ಓಡಿಬರುವ ಹಾತೊರಿಕೆ. ಸಮೀಪ ಬಂಧುಗಳ ಮನೆಮದುವೆಗೆ ಆಹ್ವಾನ ಬಂತು. ಅವಕಾಶ ಬಿಟ್ಟೆನೇ? ನಮ್ಮವರನ್ನೂ ಹೊರಡಿಸಿ ಹೊರಟು ನಿಂತೆ.

ನಮ್ಮ ರೈಲು ಪ್ರಯಾಣ ಸದಾ ಎರಡನೇ ದರ್ಜೆಯಲ್ಲೇ ಅರ್ಥಾತ್ ಇಂದಿನ ಗಾಂಧೀ ಕ್ಲಾಸು. ಆಗೆಲ್ಲಾ ಒಂದನೇ ದರ್ಜೆ ಡಬ್ಬಿಯಲ್ಲಿ ಆರಾಮವಾಗಿ ಕಾಲ್ನೀಡಿ ಕುಳಿತು ಕಾಫಿಯನ್ನೋ ತಂಪು ಪಾನೀಯವನ್ನೋ ಸಿಪ್ಪಿಸುವವರನ್ನು ಕಂಡಾಗ ಹೊಟ್ಟೆ ಉರಿದು ಹೋಗುತ್ತಿತ್ತು. ಹಾಗೆಂದು ನಾನಂತಹ ಸುಖ ಕಂಡೇ ಇರಲಿಲ್ಲವೆಂತಲ್ಲ.

ಎರಡು ವರ್ಷಗಳಿಗೊಮ್ಮೆ ಸರ್ಕಾರ ನೀಡುತ್ತಿದ್ದ ಎಲ್.ಟಿ.ಸಿ. ಸೌಲಭ್ಯ ಬಿಡದೆ ಒಂದನೇ ದರ್ಜೆಯ ಸವಲತ್ತುಗಳನ್ನು ಸಂಪೂರ್ಣ ಉಪಯೋಗಿಸಿಕೊಂಡು ಖುಷಿ ಪಡುತ್ತಿದ್ದೆ. ಆಗ ಸಹಪ್ರಯಾಣಿಕರೊಡನೆ ನಾವು ಸದಾ ಫಸ್ಟ್ ಕ್ಲಾಸ್ ಪ್ರಯಾಣಿಕರೇ. ಸೆಕೆಂಡ್ ಕ್ಲಾಸಿನಲ್ಲಿ ಕಾಲಿಡುವುದೇ ಇಲ್ಲ ಎಂದು ನಂಬಿಸಿ ಆನಂದಿಸುತ್ತಿದುದು ಉಂಟು. ಈ ವೈಭವ ಎರಡು ವರ್ಷಗಳಿಗೊಮ್ಮೆ ಮಾತ್ರ. ಮತ್ತೆಲ್ಲ ಕಾಲ ಗಾಂಧೀ ಕ್ಲಾಸೇ ಗತಿಯಾಗಿತ್ತು.

'ಈ ಬಾರಿ ಮದುವೆಗೆ ಚೆನ್ನೈಯಿಂದ ಬೆಂಗಳೂರಿಗೆ ಫಸ್ಟ್ ಕ್ಲಾಸಿನಲ್ಲೇ ಹೋಗಿಬರೋಣಾರೀ' ಎಂದೆ ಆಸೆಯಿಂದ ನಮ್ಮವರ ಬಳಿ. 'ನಾನಂತೂ ದುಡ್ಡಿನ ಗಿಡ